# "ಶ್ರೀ ವಿಜಯದಾಸರು – ಶ್ರೀ ಪ್ರಸನ್ನವೆಂಕಟದಾಸರ ಮೇಲೆ ರಚಿಸಿತ ಕೃತಿ" – "ಅಚ್ಯುತನ ಮೆಚ್ಚಿಸಿ ಪ್ರಚ್ಛನ್ ವರ ಪಡೆದ ಆಚಾರ್ಯ ಸಿರಿ ಪ್ರಸನ್ನವೆಂಕಟಾರ್ಯರ ಕಂಡೆ – ಒಳನೋಟ" –

**ಡಾ. ಸುಭಾಸ ಕಾಖಂಡಕಿ – ದೂ. 9448011954**

ಬಾಗಲಕೋಟೆಯ ಶ್ರೀ ಪ್ರಸನ್ನವೆಂಕಟದಾಸರು, ಶ್ರೀ ವಿಜಯದಾಸರಿಗಿಂತ ವಯಸ್ಸಿನಲ್ಲಿ ಹಿರಿಯರಾದರೂ ಅವರ ಸಮಕಾಲೀನರು. ತಮ್ಮ ಭಕ್ತಿಯ ಪರಾಕಾಷ್ಠತೆಯಿಂದಲೇ ತಿರುಪತಿಯ ಶ್ರೀನಿವಾಸ ದೇವರನ್ನು ಸಾಕ್ಷಾತ್ಕರಿಸಿಕೊಂಡು ಅವನಿಂದಲೇ ನೇರವಾಗಿ ಅಂಕಿತ ಪಡೆದು ಅಪರೋಕ್ಷ ಜ್ಞಾನ ಹೊಂದಿ, ದಾಸತ್ವ ಸ್ವೀಕರಿಸಿ ಹರಿದಾಸರಾದವರು. ಇಂತಹ ಮಹಾನ್ ಹರಿದಾಸರ ಮೇಲೆ ಅವರ ಸಮಕಾಲೀನರಾದ ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರು ಹಾಗೂ ನಂತರ ಬಂದಂಥ ಶ್ರೀ ಜಗನ್ನಾಥದಾಸರು, ಅವರ ಜ್ಞಾನಸಂಪತ್ತು ಹಾಗೂ ಆಧ್ಯಾತ್ಮಿಕ ಸಾಧನೆ, ತೇಜಸ್ಸನ್ನು ಸ್ತುತಿಸಿ ಕೃತಿ ರಚನೆ ಮಾಡಿದ್ದಾರೆ. ದಾಸ ಚತುಷ್ಟಯರಲ್ಲಿ ಮೂವರು ಹರಿದಾಸರು ಪ್ರಸನ್ನವೆಂಕಟರ ಆಧ್ಯಾತ್ಮಿಕ ಸಾಧನೆಯನ್ನು ದಾಖಲಿಸಿ ಕೃತಿ ರಚನೆ ಮಾಡಿರುವುದರಿಂದ, ಪ್ರಸನ್ನವೆಂಕಟರೂ ಕೂಡ ದಾಸ ಚತುಷ್ಟಯರಂತೆಯೇ ಶ್ರೇಷ್ಠ ಹರಿದಾಸರೆಂದು ಕಂಡು ಬರುತ್ತದೆ. ಈ ನಿಟ್ಟಿನಲ್ಲಿ ಮೊದಲನೆಯದಾಗಿ ಶ್ರೀ ವಿಜಯದಾಸರು ರಚಿಸಿದ ಕೀರ್ತನೆಯ ಒಳನೋಟವನ್ನು ಅರಿಯಲು ಪ್ರಯತ್ನಿಸೋಣ.

**ಅಚ್ಯುತನ ಮೆಚ್ಚಿಸಿ ಪ್ರಚ್ಛನ್ ವರ ಪಡೆದ ಆಚಾರ್ಯ ಸಿರಿ ಪ್ರಸನ್ನ**
**ವೆಂಕಟಾರ್ಯರ ಕಂಡೆ ॥ ಪ ॥**

ಭೃಗುಮುನಿ ವಂಶಜರಾದ ಶ್ರೀ ವಿಜಯದಾಸರಂತಹ ಮಹಾ–ಮಹಿಮರು ತಮ್ಮ ಸಮಕಾಲೀನರಾದ ಇನ್ನೊಬ್ಬ ಮಹಾಚೇತನರೆನಿಸಿಕೊಂಡ ದಾಸ ಶ್ರೇಷ್ಠರಾದ ಶ್ರೀ ಪ್ರಸನ್ನವೆಂಕಟದಾಸರನ್ನು ಕಂಡು ರಚಿಸಿದ ವಿಶೇಷ ಕೃತಿಯಿದು. ಅಪರೋಕ್ಷ ಜ್ಞಾನಿಗಳಾದ ಹರಿದಾಸರ ಭಕ್ತಿ, ಜ್ಞಾನಸಂಪತ್ತು, ಆಧ್ಯಾತ್ಮಿಕ ಸಾಧನೆಯ ಆಳ

ಎಷ್ಟಿರಬಹುದು ಎಂಬುದನ್ನು ಇನ್ನೊಬ್ಬ ಅಪರೋಕ್ಷಜ್ಞಾನ ಪಡೆದ ಹರಿದಾಸರು ತಮ್ಮ ಭಕ್ತಿಯ ಆಳದ ಅನುಭವದಿಂದಲೇ ಹೇಳಬಲ್ಲರು. ಇದನ್ನು ವಿಜಯದಾಸರು ಕೀರ್ತನೆಯ ಪಲ್ಲವಿಯಲ್ಲಿಯೇ ಹೇಳುತ್ತಾರೆ. ಶ್ರೀ ಪ್ರಸನ್ನವೆಂಕಟದಾಸರು ಅಂತಿಂಥ ಭಗವದ್ಭಕ್ತರಲ್ಲ, ಅಚ್ಯುತನನ್ನೇ ಮೆಚ್ಚಿಸಿದವರು, ಅಂದರೆ ಸಾಕ್ಷತ್ಕರಿಸಿಕೊಂಡವರು. ಬರೇ ಪ್ರತ್ಯಕ್ಷವಾಗಿರಿಸಿಕೊಂಡವರಲ್ಲ, ಭಗವಂತನಿಂದ ನೇರವಾಗಿ ಪ್ರಚ್ಛನ್ನ ವರ ಪಡೆದವರು. ಅಂಥ ಮಹಾಮಹಿಮರಾದ ಪ್ರಸನ್ನವೆಂಕಟದಾಸರನ್ನು ಪ್ರತ್ಯಕ್ಷವಾಗಿ ಕಂಡೆನೆಂದು ಐತಿಹಾಸಿಕವಾಗಿ ಪಲ್ಲವಿಯಲ್ಲಿಯೇ ದಾಖಲಿಸಿದ್ದಾರೆ. – ಇನ್ನು ಮುಂದಿನ ನುಡಿಗಳಲ್ಲಿ:

**ಸ್ವಕುನಾತಿ ಸೋತ್ತಮರ ಗತಿ ದಾತ ಶ್ರೀಹರಿ ।**
**ಸ್ವೀಕರಿ ಈ ಮಹಾ ಭಕುತ ಮತಿದಾಸರಲಿ ।**
**ಕಕುಲಾತಿ ತೋರಿ ಸತ್ಕೃತಿ ರಚಿಸುವಂದದಲಿ ।**
**ಕಕುತಿಯಾನಿತ್ನಖಿಲ ಸಂತಸವ ನೀಡಿದಾ ॥ 1 ॥**

ಇಲ್ಲಿ, ಸ್ವಕುನಾತಿ ಸೋತ್ತಮರ ಅಂದರೆ ತಾವು ಯಾರು ಎನ್ನುವ ಆತ್ಮಜ್ಞಾನ ತಿಳಿದವರಲ್ಲಿ ಉತ್ತಮರಾದ (ರುದ್ರಾಂಶರೆಂಬ ಪ್ರತೀತಿ) ಶ್ರೀ ಪ್ರಸನ್ನವೆಂಕಟರನ್ನು, ಎಲ್ಲ ಜೀವಾತ್ಮರಿಗೂ ದಾತನಾದಂಥ ಶ್ರೀಹರಿ, ಅನನ್ಯ ಅಂತಃಕರಣದಿಂದ ಸ್ವೀಕರಿಸಿದನಂತೆ. ಹಾಗೆಯೇ ಶ್ರೀಹರಿಯು ಕಕುಲಾತಿಯಿಂದ ಸ್ವೀಕರಿಸಬೇಕಾದರೆ, ದಾಸರ ಅನನ್ಯ ಭಕ್ತಿ ಎಷ್ಟಿರಬೇಕು. ಸಣ್ಣ ಬಾಲಕ ತಾಯಿಯನ್ನು ಹಂಬಲಿಸಿ ಕರೆದಂತೆ, ಎಲ್ಲವನ್ನೂ ಹರಿಗೊಪ್ಪಿಸಿ ಸರ್ವಸಮರ್ಪಣದಿಂದ ಶ್ರೀಹರಿಯ ಪಾದದ ಮೇಲೆ ತಲೆ ಇಟ್ಟಾಗ, ಭಗವಂತ ಅವರನ್ನು ಕಕುಲತೆಯಿಂದ ಅಪ್ಪಿಕೊಂಡನಂತೆ. ಜ್ಞಾನದ ಭಂಡಾರವನ್ನೇ ಅವರ ಕೈಗಿತ್ತನಂತೆ ಎನ್ನುವ ಭಾವವನ್ನು ಶ್ರೀ ವಿಜಯದಾಸರು ಈ ನುಡಿಯಲ್ಲಿ ಅಭಿವ್ಯಕ್ತ ಪಡಿಸಿದ್ದಾರೆ.

ಇನ್ನು ನುಡಿ 2 ರಲ್ಲಿ ಅದ್ಭುತವಾದ ಮೊಟ್ಟಮೊದಲ ಐತಿಹಾಸಿಕ ದಾಖಲೆ ಕೊಟ್ಟಿದ್ದಾರೆ:

**ಅಚ್ಯುತಾಮರ ಚಿತ್ತಗಚ್ಚಿಂತದಿಂದಿವರು ।**
**ಅರ್ಚಿಸಲು ನೆಚ್ಚಿ ಅಂಕಿತವ ನೀಡಿರಲು ॥**
**ಅಚಿಂತನ ನಣುದ್ಭುತ ವಾಂಛಿತವನರಿತರು**
**ಶ್ರೀ ಚಕ್ರಧರನಿಂಗೆ ಅಚ್ಚು–ಮೆಚ್ಚೆನಿಸಿದರು ॥ 2 ॥**

ಇಲ್ಲಿ "**ನೀನೆ ಗತಿ ಕೃಷ್ಣ ಎನಗೆ ನೀನೆ ಗತಿ. ನಿನ್ನ ಬಿಟ್ಟು ಇನ್ನಾರಿಲ್ಲೆನಗೆ**" ಎನ್ನುವ ಭಕ್ತಿಯ ಪರಾಕಾಷ್ಠತೆಯಲ್ಲಿ ಮಿಂದು, ಆನಂದದಿಂದ ಅಚ್ಯುತನನ್ನು ಅರ್ಚಿಸಿದಾಗ, ಭಕ್ತಪರಾಧೀನನಾದ ಶ್ರೀಹರಿ ಅವರ ಅಜ್ಞಾನವನ್ನು ಹೊಡಿದೋಡಿಸಿ, ಅವರ ಭಕ್ತಿಗೆ ಮೆಚ್ಚಿ, ಅವರ ನಾಲಿಗೆ ತೆಗೆದು ಅಂಕಿತದ ಬೀಜಾಕ್ಷರ ಬರೆದನಂತೆ. ಅದು ಅಂತಿಂಥ ಬೀಜಾಕ್ಷರವಲ್ಲ, "**ಪ್ರಸನ್ನವೆಂಕಟ**"ನೆಂಬ ಹರಿನಾಮ ಕೀರ್ತನೆಯ ಅಕ್ಷರಗಳು. ಅಕ್ಷಯ–ಅಕ್ಷಯವಾಗಿ ಅವರ ಶಬ್ದ ಭಂಡಾರ ಉಕ್ಕಿಹರಿದವು. ಭಾಗವತರ ಮುಕ್ತಿ ಸಾಧನಕ್ಕೆ ಹಾದಿಯಾದವು.

ಹೀಗೆ ಶ್ರೀಹರಿಗೆ ಅಚ್ಚುಮೆಚ್ಚಿನ ಭಕ್ತರಾದರು ಎಂಬ ಭಾವವನ್ನು ಈ ನುಡಿಯಲ್ಲಿ ವಿಜಯದಾಸರು ವ್ಯಕ್ತಪಡಿಸಿ, ಪ್ರಸನ್ನವೆಂಕಟರಿಗೆ, ಶ್ರೀಹರಿಯಿಂದ ನೇರವಾಗಿ ಅಂಕಿತ ಪಡೆದಿರುವುದನ್ನು ದಾಖಲಿಸಿದ್ದಾರೆ. ಇದೊಂದು ಪ್ರಪ್ರಥಮವಾಗಿ ಅವರ ಸಮಕಾಲೀನರಿಂದಲೇ ದೊರೆತ ಐತಿಹಾಸಿಕ ಮಹತ್ವದ ದಾಖಲೆ. ಇದು ಶ್ರೀ ಪ್ರಸನ್ನವೆಂಕಟರ ಸಂಶೋಧನೆಯ ಮೇಲೆ ಹೊಸ ಬೆಳಕು ಚೆಲ್ಲುತ್ತದೆ.

ಇನ್ನು ಮುಂದಿನ ಕೊನೆಯ ನುಡಿಯಲ್ಲಿ:

**ಏಸೇಸು ಜನ್ಮಗಳ ಬಯಸಿ ಬರಬೇಕೀ ।**
**ಅಸಮಾನ ಜ್ಞಾನ ನಿಧಿ ದಾಸರಾಸರೆಗಾಗಿ ॥**
**ದೋಷ ರಾಶಿಗಳಳಿದು ಶ್ರೀಶನ್ನ ತೋರಿಸುವ ।**
**ವಸುಧೀಶ ಶ್ರೀವಿಜಯ ವಿಠ್ಠಲ ದಾಸಮಣಿಯು ॥ 3 ॥**

ಎಂದು ಹೇಳಿದ್ದಾರೆ. ಈ ನುಡಿಯಲ್ಲಿ ವಿಜಯದಾಸರು ಪ್ರಸನ್ನವೆಂಕಟದಾಸರ ಜ್ಞಾನಸಂಪತ್ತು ಮತ್ತು ಆಧ್ಯಾತ್ಮಿಕ ಸಾಧನೆಯನ್ನು ಪ್ರತ್ಯಕ್ಷವಾಗಿ ಕಂಡು ಅನುಭವಿಸಿ ದಾಖಲಿಸಿದ್ದಾರೆ.

ಹಲವಾರು ಜನ್ಮಗಳ ಪುಣ್ಯ ಫಲವಿದ್ದರೆ ಮಾತ್ರ ಹರಿ ಭಕ್ತರ ಸಂಗ ದೊರಕುವುದಂತೆ. ಇಂಥ ಪುಣ್ಯದ ಫಲ ಒಂದ ಜನ್ಮದ್ದಲ್ಲ, ಎಷ್ಟೋ ಜನ್ಮಗಳದ್ದು. ಅದಕ್ಕೆ ಪ್ರಸನ್ನ ವೆಂಕಟದಾಸರು "ಸಂಗವಾಗಲಿ ಸಾಧು ಸಂಗವಾಗಲಿ" ಎಂದಿದ್ದಾರೆ.

ಹಾಗೇ ಸಾಧು–ಸಜ್ಜನರ ಸಂಗವಾಗಬೇಕಾದರೋ ನಮ್ಮ ಮುಕ್ತಿ ಮಾರ್ಗಕ್ಕೆ ಮನಸ್ಸು ಪಕ್ವವಾಗಿರಬೇಕು. ಅದು ಶ್ರೀ ಪ್ರಸನ್ನವೆಂಕಟರಂಥ ಅಸಮಾನ್ಯ ಜ್ಞಾನ ನಿಧಿಗಳ ಆಸರೆಗಾಗಿ, ಅವರ ಅನುಗ್ರಹಕ್ಕಾಗಿ ಹಂಬಲಿಸಿ ಬರಬೇಕೆಂದರೆ ಜನರಿಗೆ ಒಂದು ಜನ್ಮದ ಪುಣ್ಯ ಸಾಕಾಗುವುದಿಲ್ಲ. ಏಸೇಸು ಜನ್ಮಗಳ ಅಂದರೆ ಎಣಿಕೆ ಇಲ್ಲದಷ್ಟು ಜನ್ಮಗಳನ್ನು ದಾಟಿರಬೇಕು. ಅಂಥ ದಾಸರ ಆಸರೆಗಾಗಿ ಬಂದರೇ ನಮ್ಮ ದೋಷ ರಾಶಿಗಳನ್ನು ಕಳೆದು, ಅನನ್ಯ ಅಂತಃಕರುಣದಿಂದ ಅನುಗ್ರಹಿಸಿ, ಕಷ್ಟಸಾಧ್ಯವಾದ ಶ್ರೀಹರಿಯ ದರ್ಶನವನ್ನು ತಮ್ಮ ಪುಣ್ಯ ಫಲದಿಂದ ಮಾಡಿಸುವರಂತೆ. ಶ್ರೀಹರಿಗೆ ಅತ್ಯಂತ ನೆಚ್ಚಿನವರಾದ ಶ್ರೇಷ್ಠ ದಾಸಮಣಿ ಇವರು ಎಂದು ಶ್ರೀ ವಿಜಯದಾಸರಂಥಾ ಮಹಾಮಹಿಮರೇ ಶ್ರೀ ಪ್ರಸನ್ನವೆಂಕಟರನ್ನು ಹೀಗೆ ಕೊಂಡಾಡಿದ್ದಾರೆಂದರೆ, ಶ್ರೀ ಪ್ರಸನ್ನವೆಂಕಟದಾಸರ ಆಧ್ಯಾತ್ಮಿಕ ವ್ಯಕ್ತಿತ್ವ, ಜ್ಞಾನಸಂಪತ್ತಿನ ಹಿರಿಮೆ ಎಷ್ಟಿತ್ತು ಎಂಬ ಅರಿವು ನಮಗಾಗುತ್ತದೆ. ಇಂಥಾ ಮಹಾಮಹಿಮರ ಕೀರ್ತನೆಗಳು ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರಂತೆ ಪ್ರಚಲಿತವಾಗದಿರುವುದು ನಮ್ಮ ದುರ್ದೈವ ಎಂದು ಹೇಳಬಹುದು.